

## 1. ಪುಕ್ಕಟೆ ಪುಸ್ತಕಗಳಿಂದ ದೊರೆತ ತತ್ವಜ್ಞಾನಿ

ಬರ್ಟ್ರಂಡ್ ರಸೆಲ್‌ರಂಥ ತತ್ವಜ್ಞಾನಿಗಳ ಸಾಲಿನಲ್ಲಿ ನಿಲ್ಲುವ ಮೇರುವ್ಯಕ್ತಿತ್ವ ರಾಧಾಕೃಷ್ಣನ್ ಅವರದು. ಆದರೆ ಅವರು ತತ್ವಜ್ಞಾನ ಕ್ಷೇತ್ರಕ್ಕೆ ಬಂದದ್ದು ಆಕಸ್ಮಿಕವಾಗಿ. ಓದು ಮುಗಿದ ಮೇಲೆ ರಾಧಾಕೃಷ್ಣನ್ ಅವರು ದೇವಸ್ಥಾನದ ಅರ್ಚಕರಾಗಬೇಕೆಂಬುದು ಅವರ ತಂದೆಯ ಆಸೆಯಾಗಿತ್ತು. ಆದರೆ, ದೊಡ್ಡದಾಗಿ ಏನನ್ನಾದರೂ ಸಾಧಿಸಬೇಕೆಂದು ಹಂಬಲಿಸುತ್ತಿದ್ದ ರಾಧಾಕೃಷ್ಣನ್ – ಫಿಸಿಕ್ಸ್, ಕೆಮಿಸ್ಟ್ರಿ, ಬಾಹ್ಯಾಕಾಶ ವಿಜ್ಞಾನ, ಭೂವಿಜ್ಞಾನ ವಿಷಯಗಳಲ್ಲಿ ಹೆಚ್ಚಿನ ಅಧ್ಯಯನ ಮಾಡಬೇಕೆಂದು ಆಶಿಸಿದ್ದರು. ಕಷ್ಟಪಟ್ಟು ಓದಿ ಮದರಾಸಿನ ಕ್ರಿಶ್ಚಿಯನ್ ಮಿಷನ್ ಕಾಲೇಜಿನ ಸ್ಕಾಲರ್‌ಶಿಪ್ ಸಂಪಾದಿಸಿದ್ದರು.

ಭಾನುವಾರದ ರಜೆ ಎಂದು ಒಮ್ಮೆ ದೊಡ್ಡಪ್ಪನ ಮನೆಗೆ ಹೋದ ರಾಧಾಕೃಷ್ಣನ್ ಅವರಿಗೆ, ದೊಡ್ಡಪ್ಪನ ಮಗನಿಂದ ತಾನು ಓದಿ ಮುಗಿಸಿದ ತತ್ವಜ್ಞಾನದ ಪುಸ್ತಕಗಳು ಉಡುಗೊರೆಯಾಗಿ ದೊರೆತವು. ಪುಕ್ಕಟೆಯಾಗಿ ಸಿಕ್ಕ ಪುಸ್ತಕಗಳನ್ನು ಮನೆಗೆ ತಂದು ಓದಿದ ರಾಧಾಕೃಷ್ಣನ್, ತತ್ವಜ್ಞಾನದ ಕಡೆ ಆಕರ್ಷಿತರಾದರು. ನಂತರ ಅದೇ ವಿಷಯದಲ್ಲಿ ಪದವಿ ಮತ್ತು ಉನ್ನತ ಅಧ್ಯಯನ ಮಾಡಿ ಅಪಾರ ಜ್ಞಾನ ಸಂಪಾದಿಸಿ ತತ್ವಜ್ಞಾನಿಯಾಗಿ ಹೊರಹೊಮ್ಮಿದರು.

ಭಾರತ ತನ್ನ ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಮತ್ತು ಎರಡನೆಯವರಾದ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ಕಳೆದುಕೊಂಡಾಗ ಇಡೀ ದೇಶಕ್ಕೆ ಸಾಂತ್ವನ ಹೇಳುವ ಜವಾಬ್ದಾರಿ ರಾಷ್ಟ್ರಾಧ್ಯಕ್ಷರಾಗಿ ರಾಧಾಕೃಷ್ಣನ್ ಅವರದಾಗಿತ್ತು. ಅದನ್ನು ಪ್ರಬುದ್ಧವಾಗಿ ನಿರ್ವಹಿಸಿದ ಅವರು, ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಇಂದಿರಾಗಾಂಧಿಯವರಿಗೆ ಸಮಾಧಾನ ಹೇಳಿದ್ದಲ್ಲದೆ, ದೇಶದ ಜನರಿಗೆ ಮನೋಬಲ ತುಂಬುವ ಕೆಲಸ ಮಾಡಿದರು. ಎರಡು ದೊಡ್ಡ ಸಾವುಗಳನ್ನು ಸಮಚಿತ್ತದಿಂದ ನಿರ್ವಹಿಸಲು ಸಾಧ್ಯವಾದದ್ದು ತಾನು ಓದಿದ ತತ್ವಜ್ಞಾನದಿಂದಲೇ ಎಂಬುದು ಅವರ ನಂಬಿಕೆಯಾಗಿತ್ತು. ಪುಕ್ಕಟೆ ಪುಸ್ತಕಗಳ ಕೊಡುಗೆಯಿಂದ ನಮಗೊಬ್ಬ ಶ್ರೇಷ್ಠ ತತ್ವಜ್ಞಾನಿ ದೊರೆತರು.

## 2. ಕರೆಯದೆ ಭಾರತಕ್ಕೆ ಬಂದ ಅಲೆಕ್ಸಾಂಡರ್!

ಮೇಲ್ನೋಟಕ್ಕೆ ಕಟ್ಟುನಿಟ್ಟು ಹೆಡ್ಮಾಸ್ತರ್‌ರಂತೆ ಕಾಣುತ್ತಿದ್ದ ರಾಧಾಕೃಷ್ಣನ್ ಅದೆಷ್ಟು ಮಾರ್ಮಿಕವಾಗಿ ಹಾಸ್ಯ ಮಾಡುತ್ತಿದ್ದರು ಎಂಬುದಕ್ಕೆ ಈ ಪ್ರಸಂಗ ಸಾಕ್ಷಿ. ಅದು 1962. ರಾಧಾಕೃಷ್ಣನ್ ರಾಷ್ಟ್ರಪತಿಯಾಗಿದ್ದ ಮೊದಲ ವರ್ಷ. ಆಗ ಗ್ರೀಸ್ ದೇಶದ ರಾಜ ಭಾರತಕ್ಕೆ ಭೇಟಿ ನೀಡಿದ್ದರು. ರಾಜನನ್ನು ರಾಷ್ಟ್ರಪತಿ ಭವನಕ್ಕೆ ಬರಮಾಡಿಕೊಂಡಿದ್ದ ರಾಧಾಕೃಷ್ಣನ್, ತುಂಬಾ ತಮಾಷೆ ಸ್ವರದಲ್ಲಿ – 'ನಮ್ಮ ಆಹ್ವಾನದ ಮೇರೆಗೆ ಇಲ್ಲಿಗೆ ಬಂದ ನಿಮ್ಮ ದೇಶದ ಮೊದಲ ದೊರೆ ಎಂದರೆ ನೀವೇ. ಅಲೆಕ್ಸಾಂಡರ್ ಕರೆಯದೆ ಇಲ್ಲಿಗೆ ಬಂದುಬಿಟ್ಟಿದ್ದ' ಎಂದಿದ್ದರು.

## 3. ಮಾವೋ ಕೆನ್ನೆ ತಟ್ಟಿದ್ದರು

1957ರಲ್ಲಿ ರಾಧಾಕೃಷ್ಣನ್ ಭಾರತದ ಉಪರಾಷ್ಟ್ರಪತಿಯಾಗಿದ್ದರು. ರಾಯಭಾರಿಯಾಗಿ ಚೀನಾಗೆ ಭೇಟಿ ನೀಡಿದಾಗ, ಅಲ್ಲಿ ಚೀನಾದ ಪಿತಾಮಹ, ಕ್ರಾಂತಿಕಾರಿ ನಾಯಕ, ಕವಿ, ರಾಜಕೀಯ ಮುತ್ಸದ್ದಿ ಮತ್ತು ಚೀನಾ ದೇಶದ ಅಧ್ಯಕ್ಷ ಮಾವೋತ್ಸೆತುಂಗ್ ಅವರನ್ನು ಭೇಟಿಯಾಗಿದ್ದರು.

ಭೇಟಿಗಾಗಿ ಮನೆಗೆ ಬಂದ ರಾಧಾಕೃಷ್ಣನ್ ಅವರನ್ನು ಬಾಗಿಲು ತೆರೆದು ಸ್ವಾಗತಿಸಿದ ಕ್ರಾಂತಿಕಾರಿ ನಾಯಕ, ಹಸ್ತಲಾಘವ ನೀಡಿ ಪ್ರಯಾಣ ಮತ್ತು ಆರೋಗ್ಯದ ಕುರಿತು ವಿಚಾರಿಸಿಕೊಂಡರು. ಕೂಡಲೇ ಮಾವೋತ್ಸೆತುಂಗರ ಕೆನ್ನೆ ತಟ್ಟಿದ ರಾಧಾಕೃಷ್ಣನ್ ನಸುನಗುತ್ತಲೇ, 'ಪ್ರಯಾಣ ಸುಖಕರವಾಗಿತ್ತು ಮತ್ತು ನಾನು ಆರೋಗ್ಯವಾಗಿದ್ದೇನೆ' ಎಂದರು.

ರಾಧಾಕೃಷ್ಣನ್‌ರ ವರ್ತನೆಯಿಂದ ಮಾವೋ ಕಕ್ಕಾಬಿಕ್ಕಿಯಾಗಿಬಿಟ್ಟರು. ಅವರ ಅಂಗರಕ್ಷಕ ಪಡೆ ಅಲರ್ಟ್ ಆಯಿತು. ಏಕೆಂದರೆ ಅದುವರೆಗೂ ಯಾವುದೇ ದೇಶದ ನಾಯಕರಾಗಲಿ, ಪ್ರಧಾನಿಯಾಗಲಿ, ರಾಯಭಾರಿ ಆಗಲಿ ಮಾವೋರ ಕೆನ್ನೆ ಮುಟ್ಟಿರಲಿಲ್ಲ. ಸಾವರಿಸಿಕೊಂಡ ಮಾವೋ ಏನೋ ಹೇಳುವವರಿದ್ದರು. ಅಷ್ಟರಲ್ಲಿ ಮಾತನಾಡಿದ ರಾಧಾಕೃಷ್ಣನ್, 'ಚಿಂತಿಸದಿರಿ, ಭಯಪಡದಿರಿ. ನಾನು ಈಗಾಗಲೇ ಸ್ಟಾಲಿನ್ ಮತ್ತು ಪೋಪ್‌ರ ಕೆನ್ನೆಗಳನ್ನೂ ತಟ್ಟಿದ್ದೇನೆ' ಎಂದು ಪ್ರಾಂಜಲ ಮನಸ್ಸಿನಿಂದ ನಕ್ಕು ಪರಿಸ್ಥಿತಿಯನ್ನು ತಿಳಿಯಾಗಿಸಿದರು.

## 4. ಸ್ಟಾಲಿನ್‌ಗೆ ರಾಧಾಕೃಷ್ಣನ್ ಶಾಕ್!

1940–50ರ ಅವಧಿಯ ಸೋವಿಯತ್ ರಷ್ಯಾದಲ್ಲಿ ತತ್ವಜ್ಞಾನಿಗಳಿಗೆ ತುಂಬಾ ಬೆಲೆಯಿತ್ತು. ಅದು ವಿಶ್ವದಾದ್ಯಂತ ಶೀತಲ ಸಮರ ನಡೆಯುತ್ತಿದ್ದ ಕಾಲ. ಅದೇ ಸಮಯದಲ್ಲಿ ಸೋವಿಯತ್ ರಷ್ಯಾಕ್ಕೆ ಭಾರತದ ರಾಯಭಾರಿಯಾಗಿ ಭೇಟಿ ನೀಡಿದ್ದ ರಾಧಾಕೃಷ್ಣನ್, ಅಂದಿನ ರಷ್ಯಾದ ಅಧ್ಯಕ್ಷ ಸರ್ವಾಧಿಕಾರಿ ಸ್ಟಾಲಿನ್‌ರನ್ನು ಭೇಟಿಯಾಗಿದ್ದರು. ಅಂದಿನವರೆಗೆ ಸೋವಿಯತ್ ಯೂನಿಯನ್‌ಗೆ ಭೇಟಿ ನೀಡಿದ್ದ ಭಾರತದ ಯಾವ ರಾಯಭಾರಿಯನ್ನೂ ಭೇಟಿ ಮಾಡಲು ಒಪ್ಪದಿದ್ದ ಸ್ಟಾಲಿನ್, ರಾಧಾಕೃಷ್ಣನ್‌ರ ತತ್ವಜ್ಞಾನ ಮತ್ತು ಬೋಧನೆಯ ಔನ್ನತ್ಯದ ಬಗ್ಗೆ ಕುತೂಹಲ ತಾಳಿ ಅವರನ್ನು ಭೇಟಿ ಮಾಡಲು ಒಪ್ಪಿಗೆ ನೀಡಿದ್ದರು.

ರಾಜತಾಂತ್ರಿಕ ಮಾತುಕತೆಗಳ ಸಮಯದಲ್ಲಿ ಸ್ಟಾಲಿನ್‌ರ ಪ್ರಶ್ನೆಗಳಿಗೆಲ್ಲಾ ಸಮಾಧಾನದ ಉತ್ತರ ನೀಡಿದ ರಾಧಾಕೃಷ್ಣನ್, 'ಈಗ

